# ಮೈಸೂರು ವಿಶ್ವವಿದ್ಯಾನಿಲಯ

ಸ್ಥಾಪನೆ 1916

(ನ್ಯಾಕ್ ಸಂಸ್ಥೆಯ ಮರು ಮಾನ್ಯತೆಯಲ್ಲಿ 'ಎ' ಗ್ರೇಡ್ ಪಡೆದಿದೆ)

(ಎನ್ಐಆರ್ಎಫ್-2022: ವಿಶ್ವವಿದ್ಯಾನಿಲಯ ವರ್ಗದಲ್ಲಿ 33ನೇ ಸ್ಥಾನ ಮತ್ತು ಒಟ್ಟಾರೆ ವರ್ಗದಲ್ಲಿ 54ನೇ ಸ್ಥಾನವನ್ನು ಹೊಂದಿದೆ)


ಸಂಖ್ಯೆ:ಪ.ವಿ.8.6/07/ಅಧಿಸೂಚನೆ/2015-16

ಕುಲಸಚಿವ (ಪರೀಕ್ಷಾಂಗ) ರವರ ಕಛೇರಿ,
ವಿಶ್ವವಿದ್ಯಾನಿಲಯ ಕಾರ್ಯಸೌಧ,
ಕ್ರಾಫರ್ಡ್‌ಭವನ ಮೈಸೂರು-570 005,
ದಿನಾಂಕ: 28-10-2022

## ಸುತ್ತೋಲೆ

ವಿಷಯ: ಸ್ನಾತಕ ಪದವಿ (UG) ಅಂಕಪಟ್ಟಿಗಳ ಕುರಿತು.
ಉಲ್ಲೇಖ: ಸೆಪ್ಟೆಂಬರ್/ಅಕ್ಟೋಬರ್-2022ರಲ್ಲಿ ನಡೆದ ಸ್ನಾತಕ ಪದವಿಯ ಪರೀಕ್ಷೆಗಳ ಬಗೆಗೆ.

*****

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಸೆಪ್ಟೆಂಬರ್/ಅಕ್ಟೋಬರ್-2022ರ ಮಾಹೆಯಲ್ಲಿ ಸ್ನಾತಕ ಪದವಿಯ (UG) 2, 4 ಮತ್ತು 6ನೇ ಸೆಮಿಸ್ಟರ್‌ನ ಪರೀಕ್ಷೆಗಳು ನಡೆದಿರುವುದು ಸರಿಯಷ್ಟೆ ಹಾಗೂ ಇವುಗಳ ಫಲಿತಾಂಶಗಳನ್ನು ಪ್ರಕಟಿಸಲಾಗುತ್ತಿದೆ. ಹಾಗಾಗಿ, ಫಲಿತಾಂಶಗಳು ಪ್ರಕಟಗೊಂಡ ನಂತರ "Provisional Transcript" ಅನ್ನು ಸಿದ್ಧಗೊಳಿಸಿ ಆಯಾ ಕಾಲೇಜಿನ Portal ಗಳಲ್ಲಿ upload ಮಾಡಲಾಗುವುದು. ಸದರಿ "Provisional Transcript" ಗಳ ಪ್ರತಿಗಳನ್ನು ಮುದ್ರಿಸಿಕೊಂಡು ವಿದ್ಯಾರ್ಥಿಗಳಿಗೆ ವಿತರಿಸಿ ಅದರಲ್ಲಿ ನ್ಯೂನತೆಗಳು ಇದ್ದಲ್ಲಿ ಅವುಗಳ ಮಾಹಿತಿ ಪಡೆದು ಕ್ರೋಢೀಕರಿಸಿ, ಫಲಿತಾಂಶ ಪ್ರಕಟಗೊಂಡ 7 ದಿನದೊಳಗೆ ಪತ್ರ ಮುಖೇನ ಈ ಕಛೇರಿಗೆ ಸಲ್ಲಿಸುವುದು. ನ್ಯೂನತೆಗಳು ಇಲ್ಲದೆ ಇದ್ದರೇ "ನ್ಯೂನತೆಗಳು ಇರುವುದಿಲ್ಲ" ಎಂದು ಕಡ್ಡಾಯವಾಗಿ ಈ ಕಛೇರಿಗೆ ಪತ್ರ ಮುಖೇನ ಮಾಹಿತಿ ನೀಡುವುದು.

7 ದಿವಸಗಳ ಗಡುವು ಮೀರಿದ ನಂತರ ನಿಮ್ಮಿಂದ ನ್ಯೂನತೆಗಳ ಕುರಿತು ಯಾವುದೇ ರೀತಿಯ ಪ್ರತಿಕ್ರಿಯೆ ಬಾರದೆ ಇದ್ದಲ್ಲಿ "Provisional Transcript" ಗಳಲ್ಲಿ ಯಾವುದೇ ನ್ಯೂನತೆಗಳಿಲ್ಲ ಎಂದು ಭಾವಿಸಿ **"Original Transcript"** ಗಳನ್ನು ಮುದ್ರಿಸಿ ಕಾಲೇಜಿಗೆ ಕಳುಹಿಸಿಲು ಕ್ರಮವಹಿಸಲಾಗುವುದು.

ಒಮ್ಮೆ "Original Transcript" ಮುದ್ರಿಸಿದ ಮೇಲೆ ನ್ಯೂನತೆ ಇರುವುದಾಗಿ ತಿಳಿಸಿದರೆ ಅದಕ್ಕೆ ತಗಲುವ ಶುಲ್ಕಗಳನ್ನು ಸಂಬಂಧಪಟ್ಟವರೇ ಭರಿಸಬೇಕಾಗುತ್ತದೆ ಎಂದು ಸೂಚಿಸಲಾಗಿದೆ.

Gnana 29/10/22

ಕುಲಸಚಿವ(ಪರೀಕ್ಷಾಂಗ)

ಗೆ:

1. ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಬರುವ ಮೈಸೂರು, ಮಂಡ್ಯ ಹಾಸನ ಮತ್ತು ಚಾಮರಾಜನಗರ ಜಿಲ್ಲೆಗಳ ಎಲ್ಲಾ ಸ್ನಾತಕ ಪದವಿ ಕಾಲೇಜುಗಳ ಪ್ರಾಂಶುಪಾಲರುಗಳು/ನಿರ್ದೇಶಕರು/ಡೀನರು, ವಾಕ್ ಮತ್ತು ಶ್ರವಣ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು/ಜೆ.ಎಸ್.ಎಸ್. ಕಾಲೇಜು ವಾಕ್ ಮತ್ತು ಶ್ರವಣ ಸಂಸ್ಥೆ, ಜೆ.ಎಸ್.ಎಸ್ ಕಾಲೇಜು, ಎಂ.ಜಿ. ರಸ್ತೆ, ಚಾಮರಾಜೇಂದ್ರ ದೃಶ್ಯ ಕಲಾ ಅಕಾಡೆಮಿ (ಕಾವ), ಸಿದ್ಧಾರ್ಥನಗರ, ಮೈಸೂರು.
2. ವಿಶೇಷಾಧಿಕಾರಿಗಳು, ಪರೀಕ್ಷಾ ಸುಧಾರಣಾ ಘಟಕ, ಪರೀಕ್ಷಾಭವನ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
3. ವ್ಯವಸ್ಥಾಪಕರು, ಮೆಟಾ-ಐ ಪ್ರೈವೇಟ್ ಲಿಮಿಟೆಡ್, ಪರೀಕ್ಷಾ ಭವನ, ಮೈವಿವಿ, ಮೈಸೂರು.
4. ಮಾನ್ಯ ಕುಲಪತಿಗಳ/ಕುಲಸಚಿವರ/ಕುಲಸಚಿವ(ಪರೀಕ್ಷಾಂಗ)/ಹಣಕಾಸು ಅಧಿಕಾರಿ ಅವರುಗಳ ಆಪ್ತ ಸಹಾಯಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
5. ಕಛೇರಿ ಪ್ರತಿ.

E:S/8.6\Kannda Letters-Ma